ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಏಕೆ ಮುಖ್ಯಮಂತ್ರಿಗಳಿಗೆ ಗಮನ ಸೆಳೆಯುತ್ತೇನೆ ಎಂದರೆ ತಾವು ನಮ್ಮ ಜಿಲ್ಲೆಯವರು. ಅವರು ಮಾಡಿದಂತೆ ನೀವು ಮಾಡಿದರೆ ಹೇಗೆ? ದಯವಿಟ್ಟು ಚುನಾವಣೆಯನ್ನು ನೀವು ಯಾವಾಗ ಮಾಡುತ್ತೀರಿ ಎಂದು ಹೇಳಿ.

ಉಪಾಧ್ಯಕ್ಷರು : ಅದಕ್ಕೆ ಸಂಬಂಧಪಟ್ಟ ಮಂತ್ರಿಯನ್ನು ಕರೆಯಿಸಿ ಮಾತನಾಡಿ ಹೇಳುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಚುನಾವಣೆ ನಡೆಸುವುದಕ್ಕೆ ಕೋರ್ಟಿಗೆ ಹೇಳಬೇಕಾದರೆ ಮುಖ್ಯಮಂತ್ರಿಯವರು ಹೇಳುವುದಕ್ಕೆ ತೊಂದರೆಯೇನು?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ನನಗೆ ಸಹಕಾರಿ ಸಂಘಗಳು, ಈ ಎ.ಪಿ.ಎಂ.ಸಿ ಈ ವಿಷಯಗಳನ್ನೇ ನಾನು ಎಂದೂ ಓದುವುದಕ್ಕೆ ಹೋಗಿಲ್ಲ. ನೋಡುವುದಕ್ಕೆ ಹೋಗಿಲ್ಲ. ಅವರು 22 ವರ್ಷವಾಯಿತು ಎಂದರಲ್ಲಾ, 22 ವರ್ಷ ಕಾದಮೇಲೆ ಇನ್ನೊಂದು ಎರಡು ವರ್ಷ ಕಾಯಿರಿ.

ಭದ್ರ ನಾಲೆ ಆಧುನೀಕರಣಗೊಳಿಸುವುದು.

ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಉಪಾಧ್ಯಕ್ಷರೇ, ಭದ್ರಾ ಅಣೆಕಟ್ಟು ಕಟ್ಟಿ 30 ವರ್ಷವಾಯಿತು. ಅದಾದನಂತರ ನಾಲೆಗಳು ಒಡೆದುಹೋಗಿ ನೀರು ಟೈಲೆಂಡರ್ಸ್‌ಗೆ ಬರದಂತೆ ರೈತರಿಗೆ ಸಾಕಷ್ಟು ತೊಂದರೆಯಾಗಿದ್ದರೂ ಇವತ್ತು ಮಾನ್ಯ ನೀರಾವರಿ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ನನ್ನ ಕ್ಷೇತ್ರದ ಮಲೆಬೆನ್ನೂರಿನಲ್ಲಿ ಬಂದಾಗ ರೈತರ ಪರವಾಗಿ ಎಲ್ಲಾ ರೈತರು ಒಂದು ಬೇಡಿಕೆಯನ್ನು ಇಟ್ಟಿವು. ತತ್ ಕ್ಷಣ ಅದನ್ನು ಮಾಡ್ರನೈಜೇಶನ್ ಮಾಡಬೇಕು. ಅದರ ಬಗ್ಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಮಂತ್ರಿಗಳು ಅಂದು ಭರವಸೆಯನ್ನು ಕೊಟ್ಟು ಎರಡು ವರ್ಷವಾಯಿತು. ರೈತರಿಗೆ ಬಹಳ ತೊಂದರೆಯಾಗಿದೆ. ಕೊನೆಯ ಹಂತದಲ್ಲಿರುವವರಿಗೆ ನೀರೇ ಬರುತ್ತಿಲ್ಲ. ಬ್ರೀಚಸ್ ಆಗಿದೆ. ದುರಸ್ತಿಯಾಗಿಯೇ ಇಲ್ಲ. ಅಂದರೆ ಈ ನೀರಾವರಿ ಮಂತ್ರಿಗಳ ಬಗ್ಗೆ ಬಹಳ ಭರವಸೆಯನ್ನು ನಾವು ಇಟ್ಟುಕೊಂಡಿದ್ದೆವು. ಎಲ್ಲಾ ದುರಸ್ಥಿ ಮಾಡುತ್ತಾರೆ ಎಂದು. ಅವರು ಏಕೋ ನಮ್ಮ ಭಾಗಕ್ಕೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆ. ಅದೇನು ಎಂದು ಅರ್ಥವಾಗುತ್ತಿಲ್ಲ. ಆದ್ದರಿಂದ ನಮ್ಮ ಜಿಲ್ಲೆಯವರೇ ಮುಖ್ಯಮಂತ್ರಿಗಳಾಗಿದ್ದಾರೆ. ಅವರು ನಾಗೇಗೌಡರು ಬಹಳ ಆತ್ಮೀಯ ಸ್ನೇಹಿತರಾಗಿದ್ದು ನಾವು ಹೇಳಿದ್ದು ಮಾಡುತ್ತಾರೆ ಎಂದು ನಂಬಿದ್ದೆವು. ಭರವಸೆ ಕೊಟ್ಟಿದ್ದನ್ನು ಉಳಿಸಿಕೊಳ್ಳುತ್ತಾರೋ, ರೈತರಿಗೆ ಅನುಕೂಲ ಮಾಡುತ್ತಾರೋ ಎನ್ನುವುದನ್ನು ಅದನ್ನು ತಮ್ಮೂಲಕ ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ತಕ್ಷಣ ಮಾಡ್ರನೈಜೇಷನ್ ಆಫ್ ದಿ ಕ್ಯಾನಲ್‌ನ್ನು ತೆಗೆದುಕೊಳ್ಳಬೇಕೆಂದು ತಮ್ಮೂಲಕ ಕೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ನಮ್ಮ ಮುಖ್ಯಮಂತ್ರಿಗಳು ಮಲೆಬೆನ್ನೂರಿನಲ್ಲಿ ಯಾವ ಯಾವ ಭರವಸೆಯನ್ನು ಕೊಟ್ಟಿದ್ದರೋ ಆ ಎಲ್ಲಾ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಕೊಂಡಜ್ಜಿ ಕೆರೆಯಿಂದ ಇಲ್ಲಿಯವರೆಗೆ ಎಲ್ಲಾ ಕೆಲಸವನ್ನು ಮುಗಿಸಿದ್ದೇವೆ. ಒಂದೇ

ಒಂದು ಬಹಳ unfortunate thing in the Legislature, ಎಂದರೆ ಮಾಡಿದ್ದನ್ನು ಮಾತ್ರ ಮರೆತೇಬಿಡುತ್ತಾರಲ್ಲ. He did not say that.

ಶ್ರೀ ಹೆಚ್. ಶಿವಪ್ಪ : ಇದು ಬಹಳ ದೊಡ್ಡ ಕೆಲಸ. ಮಾಡಿಕೊಟ್ಟಿದ್ದಾರೆ. ವೈಯಕ್ತಿಕವಾಗಿ ಕೊಂಡಜ್ಜಿಕೆರೆಗೆ ಮಾಡಿಕೊಟ್ಟಿದ್ದಾರೆ. ದೇವರಬಿಳಿ ಕೆರೆಗೆ ಮಾಡಿಕೊಟ್ಟಿದ್ದಾರೆ. ಸಣ್ಣ ಸಣ್ಣ ಪಿಕಪ್ ಮಾಡಿಕೊಟ್ಟಿದ್ದಾರೆ. 140ಕೋಟಿ ರೂಪಾಯಿಗಳ ಕೆಲಸವಿದು. ಅಚ್ಚುಕಟ್ಟಿನ ಅಡಿಯಲ್ಲಿ ಬರುವ ಎಲ್ಲಾ ರೈತರಿಗೆ ಬೇಕಾಗಿರುವಂಥದ್ದು. ವೈಯಕ್ತಿಕವಾಗಿ ಮಾಡಿಕೊಟ್ಟಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಕೊನೆಯ ಭಾಗದ ಹರಿಹರ, ಹಾಗೂ ಕೊನೆಯ ಭಾಗದಲ್ಲಿ ಸಾಕಷ್ಟು ಗಲಾಟೆ ಇದೆ, ತೊಂದರೆ ಇದೆ ಎಂದು ಹೇಳಿ ಅದನ್ನು ಮಾಡ್ರನೈಜೇಷನ್ ಮಾಡಬೇಕು, ಕೆನಾಲ್ ಬಹಳಷ್ಟು ಹದಗೆಟ್ಟಿದೆ. ಅದಕ್ಕೋಸ್ಕರ ಮಾಡ್ರನೈಜೇಷನ್ ಮಾಡಬೇಕೆಂದು ಮಾಡಿ ನಾವು 100 ಕೋಟಿ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಿದ್ದೇವೆ. ಮಾಡ್ರನೈಜೇಷನ್ ಆಫ್ ಭದ್ರಾ ಕೆನಾಲ್ಸ್ ನ್ನು ಅದಕ್ಕಾಗಿ ನೂರು ಕೋಟಿ ರೂಪಾಯಿಗಳ ಎಸ್ಟಿಮೇಟ್ಸನ್ನು ಮಾಡಿದ್ದೇವೆ. ಟೆಕ್ನಿಕಲ್ ಕಮಿಟಿ ಅಪ್ರೂವ್ ಮಾಡಿದೆ. ಮೇಜರ್ ಇರಿಗೇಷನ್ ಬೋರ್ಡ್ ಅಪ್ರೂವ್ ಮಾಡಿದೆ. ಆರ್ಥಿಕ ಇಲಾಖೆಯಲ್ಲಿ ಸ್ವಲ್ಪ ಅಬ್ಜೆಕ್ಷನ್ ಇತ್ತು. ಕಾರಣ ಏನೆಂದರೆ ನೂರು ಕೋಟಿ ರೂಪಾಯಿಗಳನ್ನು ಯಾವ ರೀತಿ ತೆಗೆದುಕೊಳ್ಳಬೇಕು, ನೀರನ್ನು ನಿಲ್ಲಿಸಬೇಕು ಆ ಏರಿಯಾದಲ್ಲಿ ಇಲ್ಲದಿದ್ದರೆ ಫೇಸ್ಡ್ ಮ್ಯಾನರ್‌ನಲ್ಲಿ ಏನಾದರೂ ಮಾಡಬೇಕಾ ಎನ್ನುವುದು ಒಂದು ಸಮಸ್ಯೆಯಾಗಿದೆ. ಎರಡನೆಯದು ನಾನೇನು ಈಗಾಗಲೇ ಅಲ್ಲಂ ವೀರಭದ್ರಪ್ಪನವರಿಗೆ ಹೇಳಿದೆ. 281ಕೋಟಿ ರೂಪಾಯಿ ವಿಶ್ವಬ್ಯಾಂಕ್‌ನ ಅಸಿಸ್ಟೆನ್ಸ್ ಕೇಳಿದ್ದೇವೆ. ಡಬ್ಲ್ಯೂ.ಆರ್.ಸಿ.ಸಿ. ಒಳಗಡೆ ಈ ಯೋಜನೆಯೊಳಗೆ ಸೇರಿಸಿದ್ದೇವೆ. ಈಗಾಗಲೇ ನಾವು ಸಬ್ ಮಿಟ್ ಮಾಡಿದ್ದೇವೆ. ಇನ್ನು ಆರೇಳು ತಿಂಗಳಲ್ಲಿ ಡಬ್ಲ್ಯೂ.ಆರ್.ಸಿ.ಸಿ ಪ್ರಾಜೆಕ್ಟ್ ಅಪ್ರೂವ್ ಆದರೆ 281 ಕೋಟಿ ರೂಪಾಯಿಯಲ್ಲಿ ನೂರು ಕೋಟಿ ರೂಪಾಯಿಗಳು ಇವರಿಗೆ ಸೇರಿಕೊಂಡಿದೆ. ಅದು ಬಂದ ತಕ್ಷಣ ಎಲ್ಲಾ ಪೇಪರ್ ವರ್ಕ್ ಇದೂ ಕಂಪ್ಲೀಟ್ ಮಾಡಿದ್ದೇವೆ. ಒಂದು ಪಕ್ಷವೇನಾದರೂ ಅದು ತಡವಾದರೆ ನಾನು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಇದರ ಬಗ್ಗೆ ಫೈನಾನ್ಸಿಯಲ್ ಅಲೋಕೇಷನ್‌ನ್ನು ಯಾವ ರೀತಿ ಮಾಡಬೇಕೆಂದು ಅವರ ಸಲಹೆಯನ್ನು ತೆಗೆದುಕೊಂಡು ಈ ಪ್ರಾಜೆಕ್ಟನ್ನು ಹೇಗೆ ಪ್ರಾರಂಭ ಮಾಡಬೇಕೆನ್ನುವ ಬಗ್ಗೆ ಒಂದು ರೂಪುರೇಷೆಯನ್ನು ಈ ವರ್ಷದಲ್ಲಿ ಕೊಡುತ್ತೇವೆಂದು ತಮ್ಮ ಖಾಂತರ ತಿಳಿಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಅಲ್ಲಿ ಬಂದಿರುವ ತೊಂದರೆ ಬರೀ ಹಣದಷ್ಟೇ ಅಲ್ಲ. ಭದ್ರಾ ಮಾಡ್ರನೈಜೇಷನ್ ಏನು ಇದೆ, ಏಕೆಂದರೆ ನಾನೂ ಅದೇ ಪ್ರದೇಶದಲ್ಲಿರುವವನು. ನನ್ನ ಹೊಲಕ್ಕೂ ನೀರು ಬರುವುದು ಅಲ್ಲಿಯೇ. ಒಂದು ಸಾರಿ ಏನು ಮಾಡಿದೆವು ಎಂದರೆ ಒಲೆವಾರು ಪದ್ಧತಿ ಎಂದು ಮಾಡಿ ಕಾಲುವೆಗಳನ್ನೆಲ್ಲಾ ಸರಿಯಾಗಿ ದುರಸ್ತಿಮಾಡಿ ಆಮೇಲೆ ಇನ್ನೊಂದು ಏನೆಂದರೆ ಒಂದು ವರ್ಷ ಫಸಲು ಕಳೆದುಕೊಳ್ಳುವುದಕ್ಕೆ ಅಲ್ಲಿನ ರೈತರು ತಯಾರಾಗಬೇಕು. ಅವರಿಗೆ ನಾವು ಮೊದಲೇ ಅನೌನ್ಸ್ ಮಾಡಬೇಕು. ಈ ವರ್ಷ ನೀರು

ಕೊಡುವುದಿಲ್ಲವೆಂದು. ಅಲ್ಲಿ ತೆಂಗು ಇದೆ, ಅಡಿಕೆ ಇದೆ, ಬಾಳೆ ಇದೆ. ಆದ್ದರಿಂದ ಎಲ್ಲಿ ತೋಟಗಳು ಇದ್ದಾವೋ ಅಲ್ಲಿ ನೀರು ಕೊಡದಿದ್ದರೆ ತೋಟ ಹೋಗಿಬಿಡುತ್ತವೆ. There are many connected problems. ಬರೀ ದುಡ್ಡು ತರುವುದು ಅಷ್ಟೇ ಅಲ್ಲ. ನಿನ್ನೆ ಹೇಳಿದ್ದೇನೆ. ಇನ್ನೊಂದು ನಿಗಮವನ್ನು ಮಾಡುತ್ತೇವೆ. ಸಾಲ ಮಾಡುತ್ತೇವೆ. ಭದ್ರಾ ಮಾಡ್ರನೈಜೇಷನ್ ಬಹಳ ಅವಶ್ಯಕತೆ ಇದೆ ಎಂದು ನನಗೂ ಸ್ವತಃ ಗೊತ್ತಿದೆ. ಕಾಲುವೆಗಳ ಮೇಲೆಲ್ಲಾ ಎತ್ತಿನಗಾಡಿ ಓಡಾಡುತ್ತವೆ. ಅಲ್ಲಿ ರೈತರು ಸಹಕರಿಸಬೇಕು. ರೈತರು ಸಹಕಾರ ಮಾಡದಿದ್ದರೆ ಹೇಗೆ? ಬರೀ ಒಂದು ಫಸಲಿಗೆ ನೀರು ನಿಲ್ಲಿಸಿದ್ದಕ್ಕೆ ಹರಿಹರದವರು ಹೊರಟರೆ, ದಾವಣಗೆರೆಯವರು ಹೊರಟರೆ ಹೇಗೆ?

ಶ್ರೀ ಹೆಚ್. ಶಿವಪ್ಪ : ಹಿಂದೆ ನಾವು ಒಲೆವಾರು ಪದ್ಧತಿಯನ್ನು ಮಾಡಿದ್ದೆವು. ಅದನ್ನು ರೈತರು ಒಪ್ಪುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಅಲ್ಲಿನ ರೈತರಿಗೆ ನೀವೆಲ್ಲಾ ಹೇಳಬೇಕು. ನಾನೂ ಹೇಳಬೇಕು. ಎಲ್ಲರೂ ಹೇಳಬೇಕು ಒಂದು ವರ್ಷ ಫಸಲು ಕಳೆದುಕೊಳ್ಳುವುದಕ್ಕೆ ತಯಾರು ಇರಬೇಕು. ನಾವು ವಿ.ಸಿ.ನಾಲೆಯನ್ನು ಆಧುನೀಕರಣ ಮಾಡಲು ಸ್ವಲ್ಪ ದಿವಸ ಅಲ್ಲಿ ನೀರನ್ನು ಬಿಡಲಿಲ್ಲ. ಅದಕ್ಕೆ ಮಂಡ್ಯ ಜಿಲ್ಲಾ ರೈತರು ಒಪ್ಪಿದ್ದರು. ಹಾಗೆ ಅಲ್ಲಿ ಒಪ್ಪಿಸುವವರಿಲ್ಲ. ಆ ಭಾಗದ ಎಂ.ಎಲ್.ಎ, ಎಂ.ಪಿ., ರವರುಗಳಿದ್ದಾರೆ, ತಾವೆಲ್ಲರೂ ಒಂದು ವರ್ಷ ಅಲ್ಲಿ ನೀರನ್ನು ನಿಲ್ಲಿಸಿದರೆ ಅದನ್ನು ವಿರೋಧ ಮಾಡದಿರುವ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳಿ. ಈ ಕೆಲಸವನ್ನು ಮಾಡಲು ಮೂರು ವರ್ಷ ಬೇಕಾಗುತ್ತದೆ. ಆದ್ದರಿಂದ ಒಂದೊಂದು ಏರಿಯಾವನ್ನು ಜೋನ್ ರೀತಿ ಮಾಡಿ ಒಂದೊಂದು ಜೋನ್ ನಲ್ಲಿ ಒಂದೊಂದು ವರ್ಷ ನೀರನ್ನು ನಿಲ್ಲಸಬಹುದು. ಆ ರೀತಿಯಾದರೆ ಕೆಲಸವಾಗುತ್ತದೆ. ಆ ಕೆಲಸಕ್ಕೆ ನಾವೆಲ್ಲಾ ತಯಾರಿ ಮಾಡಿಕೊಳ್ಳೋಣ.

ಶ್ರೀ ಹೆಚ್. ಶಿವಪ್ಪ : ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸಂಬಂಧಪಟ್ಟ ಶಾಸಕರುಗಳ, ಎಂ.ಪಿ. ಯವರ ಸಭೆ ಕರೆಯಬೇಕೆಂದು ಕೇಳಿಕೊಂಡಿದ್ದೇವೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲೇ ಕೂಡಲೇ ಸಭೆಯನ್ನು ಕರೆಯುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಶಿವಮೊಗ್ಗ ಜಿಲ್ಲೆಗೆ ಏಪ್ರಿಲ್ 30ರಲ್ಲಿ ಎ.ಪಿ.ಎಂ.ಸಿ ಚುನಾವಣೆಯನ್ನು ಮಾಡುತ್ತೇವೆಂದು ಹೇಳಿದ್ದಿರಿ. ಶಿವಮೊಗ್ಗ ಮತ್ತು ಚಿಕ್ಕಮಗಳೂರು ಎರಡು ಮೂರು ತಾಲ್ಲೂಕುಗಳಲ್ಲಿ ಚುನಾವಣೆಯಾಗಿ ಸುಮಾರು ವರ್ಷಗಳಾಗಿದೆ. ಆದ್ದರಿಂದ ತಾವು ಇಲ್ಲಿ ಚುನಾವಣೆಯನ್ನು ಮಾಡುತ್ತೀರ?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಾವು ಎ.ಪಿ.ಎಂ.ಸಿ ಚುನಾವಣೆಯನ್ನು ಮಾಡುವಲ್ಲಿ ಯಾವಾಗಲೂ ಹಿಂಜರಿದಿಲ್ಲ. ಮೊದಲಿನಿಂದಲೂ ಸರಿಯಾಗಿಯೇ ಮಾಡಿಕೊಂಡು ಬಂದಿದ್ದೇವೆ. ಈ ಹಿಂದೆ ಶಿವಮೊಗ್ಗ ಮಾರುಕಟ್ಟೆ ಮತ್ತು ಕೊಪ್ಪ ಮಾರುಕಟ್ಟೆಗಳೆರಡು ಸೇರಿ ಒಂದು ಮಾರುಕಟ್ಟೆಯಾಗಿತ್ತು. ಅದನ್ನೀಗ ಬೇರೆ ಮಾಡಿ ಶಿವಮೊಗ್ಗಕ್ಕೆ ಬೇರೆ

ಕೊಪ್ಪಗೆ ಬೇರೆ ಸಮಿತಿಯನ್ನು ಮಾಡಲಾಗಿದೆ. ಶಿವಮೊಗ್ಗ ತೀರ್ಥಹಳ್ಳಿ ತಾಲ್ಲೂಕುಗಳಿಗೆ ಹೊಸದಾಗಿ ಕ್ಷೇತ್ರ ವಿಂಗಡಣೆ ಮಾಡಲು ಪ್ರಕಟಣೆ ಹೊರಡಿಸಿ ಕನಿಷ್ಟ ಮೂವತ್ತು ದಿನಗಳ ಕಾಲಾವಕಾಶ ನೀಡಿ ಮತದಾರರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ವಿಲೇ ಮಾಡಲು ಸಾಕಷ್ಟು ಕಾಲಾವಕಾಶ ಬೇಕಾಗಿರುವುದರಿಂದ ಚುನಾವಣಾ ವೇಳಾಪಟ್ಟಿಯ ಘೋಷಣೆಯ ನಂತರ ಚುನಾವಣೆಯನ್ನು ನಡೆಸಲು ನಿಯಮಾವಳಿಯ ಪ್ರಕಾರ 45 ದಿವಸಗಳು ಬೇಕಾಗುವುದು. ಆದ್ದರಿಂದ ಈ ಪ್ರಕ್ರಿಯೆಗೆ ಕನಿಷ್ಟ 112 ದಿವಸಗಳ ಅಗತ್ಯವಿದೆಯೆಂದು ಶಿವಮೊಗ್ಗದ ಜಿಲ್ಲಾಧಿಕಾರಿಯವರು ತಿಳಿಸಿರುತ್ತಾರೆ. ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಸರ್ಕಾರವು ದಿನಾಂಕ : 30-4.98ರಲ್ಲಿ ಚುನಾವಣೆಯನ್ನು ನಡೆಸಲು ಮೇಲಿನ ಹಿನ್ನೆಲೆಯಲ್ಲಿ ಸಾಧ್ಯವಿಲ್ಲದಿರುವುದರಿಂದ ಅವಧಿ ವಿಸ್ತರಣೆಗೆ ಅರ್ಜಿ ಸಲ್ಲಿಸಿದ್ದು ಸಧ್ಯದಲ್ಲಿ ವಿಚಾರಣೆಗೆ ಬರಲಿದೆ. ಈ ಹಿಂದೆ ಅಲ್ಲಿ ನಾಮಿನೇಟೆಡ್ ಬಾಡಿ ಇತ್ತು. ಅದರ ಅವಧಿಯು 1.2.98ಕ್ಕೆ ಮುಗಿದಿದೆ. ಮತ್ತೆ ಚುನಾವಣೆ ಮಾಡಲು ಜಿಲ್ಲಾಧಿಕಾರಿಯವರಿಗೆ ಪತ್ರವನ್ನು ಬರೆದಿದ್ದೇವೆ. ಚುನಾವಣೆ ಮಾಡಲು ಕನಿಷ್ಟ 112 ದಿವಸ ಸಮಯ ಬೇಕಾಗುತ್ತದೆಂದು ಅವರು ತಿಳಿಸಿರುತ್ತಾರೆ. ಇದರ ಬಗ್ಗೆ ಉಚ್ಚನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತೇವೆ. ನ್ಯಾಯಾಲಯಕ್ಕೆ ಈಗ ರಜೆ ಇರುವುದರಿಂದ ವಿಚಾರಣೆಗೆ ತೆಗೆದುಕೊಂಡಿಲ್ಲ. 112 ದಿವಸಗಳಾದ ಮೇಲೆ ತಕ್ಷಣವೆ ಚುನಾವಣೆಯನ್ನು ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಹಾಗಾದರೆ ಏಪ್ರಿಲ್30ರೊಳಗೆ ಚುನಾವಣೆಯನ್ನು ಮಾಡುತ್ತೇವೆಂದು ಏಕೆ ಹೇಳಿದಿರಿ? 112 ದಿವಸಗಳ ಸಮಯ ಬೇಕೆಂದು ತಮಗೆ ಮೊದಲೆ ಗೊತ್ತಿರಲಿಲ್ಲವೇ?

ಶ್ರೀ ಹೆಚ್. ನಾಗಪ್ಪ : ಕೋರ್ಟ್ ನವರು 30-4-98ರೊಳಗೆ ಚುನಾವಣೆ ಮಾಡಿ ಎಂದು ಹೇಳಿದ್ದಾರೆ. ಆದರೆ ನಮಗೆ ಚುನಾವಣೆ ಪ್ರಕ್ರಿಯೆ ಮಾಡಲು ಕನಿಷ್ಟ112ದಿವಸಗಳು ಬೇಕಾಗಿರುವುದರಿಂದ ಮತ್ತೆ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿರುತ್ತೇವೆ. 112 ದಿವಸಗಳೊಳಗೆ ಖಂಡಿತವಾಗಿ ಚುನಾವಣೆಯನ್ನು ಮಾಡುತ್ತೇವೆ.

ರಾಜ್ಯದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳ ಬಗ್ಗೆ ಆಗಿಂದಾಗ್ಗೆ ಓದುತ್ತಿರುತ್ತೇವೆ. ಅದು ಲಾಕಪ್ ಸಾವು ಇರಬಹುದು, ಹಿಂಸೆ ಇರಬಹುದು, ದಲಿತರ ಮೇಲೆ ಹಲ್ಲೆ ಇರಬಹುದು, ಗಿರಿಜನರ ಮೇಲೆ ಹಲ್ಲೆ ಇರಬಹುದು, ಅದರ ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡುತ್ತೇವೆ, ಪ್ರತಿಭಟಿಸುತ್ತೇವೆ ಅನಂತರ ಮರೆತುಬಿಡುತ್ತೇವೆ. 1994ರಲ್ಲಿ 9 ಲಾಕಪ್ ಸಾವುಗಳಾಯಿತು, 1995ರಲ್ಲಿ 3, 1996ರಲ್ಲಿ 10, 1997ರಲ್ಲಿ 5 ಆಗಿದೆ. ಸಾಮಾನ್ಯವಾಗಿ ಇಂಥ ಪ್ರಕರಣಗಳಲ್ಲಿ ಪೋಲೀಸ್‌ನವರ ಲಾಠಿ ಏಟು, ಹಾವುಕಡಿದು ಸತ್ತರು ಎಂದು, ಆತ್ಮಹತ್ಯೆಯೆಂದು ಮಾಹಿತಿ ಇರುತ್ತದೆ. 1977ರಲ್ಲಿ ನ್ಯಾಷನಲ್ ಪೋಲೀಸ್ ಕಮೀಷನ್ ಪ್ರತಿಯೊಂದು ಜಿಲ್ಲೆಯಲ್ಲಿ ಇಂಥ ಪ್ರಕರಣಗಳು ಆದಾಗ ಡಿಸ್ಟ್ರಿಕ್ಟ್ ಎನ್‌ಕ್ವೈರಿ ಅಥಾರಿಟಿಯನ್ನು ಮಾಡಬೇಕೆಂದು ಆದೇಶವನ್ನು ಹೊರಡಿಸಿತ್ತು. ನಮ್ಮ ರಾಜ್ಯದಲ್ಲಿ ಅದನ್ನು ಮಾಡಲಿಲ್ಲ. 1993ರಲ್ಲಿ ಪ್ರೊಟೆಕ್ಷನ್ ಆಫ್ ಹ್ಯೂಮನ್ ರೈಟ್ ಆಕ್ಟ್ ಜಾರಿಗೆ ಬಂತು.